ಅವರನ್ನೂ ಸೇರಿಸ್ಕೊಳ್ಳಿ.

'ಯೆಸ್ ಸಾರ್'.

ಟೇಬಲ್ ಮೇಲಿದ್ದ ಅಮ್ಮುವಿನ ಕೊಲೆಗೆ ಸಂಬಂಧಿಸಿದ ಸಾಕ್ಷಿ ಪುರಾವೆಗಳ ಪಟ್ಟಿ, ಫೋಟೋಗಳು, ಮಾಯಣ್ಣನನ್ನು ಹಂಗಿಸುತ್ತಿತ್ತು. ಕೊಲೆ ನಡೆದ ಜಾಗದ ಸ್ಥಳ ಮಹಜರ್ ಸಮಯದಲ್ಲಿ ತೆಗೆದ ಫೋಟೋಗಳನ್ನು ಮತ್ತೆ ಮತ್ತೆ ತಿರುವಿ ನೋಡುತ್ತಿದ್ದಾಗ ಒಂದು ಫೋಟೋ ವಿಶೇಷವಾಗಿ ಮಾಯಣ್ಣನ ಗಮನ ಸೆಳೆದಿತ್ತು.

'ಎಲ್ಲಾರು ಬನ್ನಿ'.

ಸ್ಟೇಷನ್ನಿನಲ್ಲಿದ್ದ ಎಲ್ಲಾ ಪೇದೆಗಳು ಲಗುಬಗನೆ ಬಂದು ಸಾಲಾಗಿ ನಿಂತರು. ಮಾಯಣ್ಣ ತನ್ನ ವಿಶೇಷ ಗಮನ ಸೆಳೆದಿದ್ದ, ಅಮ್ಮುವಿನ ಪಾದಗಳನ್ನು ಮಾತ್ರ ಸೆರೆಹಿಡಿದಿದ್ದ ಆ ಫೋಟೊವನ್ನು ಮೇಜಿನ ಮೇಲಿಟ್ಟು 'ಎಲ್ಲರೂ ಗಮನವಿಟ್ಟು ಈ ಫೋಟೋ ನೋಡಿ, ಏನಾದರು ವಿಶೇಷವಿದ್ದರೆ ಹೇಳಿ'.

ಆ ಫೋಟೊವನ್ನು ಮತ್ತೆ ಮತ್ತೆ ನೋಡಿದರೂ ಯಾರಿಗೂ ಏನೂ ವಿಶೇಷ ಕಂಡಿರಲಿಲ್ಲ. ಸೋಲೊಪ್ಪಿಕೊಂಡಂತೆ ಆ ಫೋಟೊನ ಮಾಯಣ್ಣನ ಮುಂದೆ ಇಟ್ಟರು.

'ಕಾಲಲ್ಲಿ ಹತ್ತೂ ಬೆರಳು ಸರಿಯಾಗೇ ಇದೆಯಲ್ಲ ಸಾರ್?' ಕಾಟಯ್ಯನ ಜೋಕಿಗೆ ಯಾರೂ ನಕ್ಕಿರಲಿಲ್ಲ.

'ಸಾರ್, ಬಲಗಾಲಿಗೆ ನೇಲ್ ಪಾಲಿಷ್ ಹಾಕಿದ್ದಾರೆ, ಎಡಗಾಲಿನ ಬೆರಳುಗಳಿಗೆ ಇನ್ನೂ ಬಣ್ಣ ಬಿದ್ದಿಲ್ಲ ಸಾರ್'.

ಸರಿ ವಿನಯ್.... ಅಂದರೆ ಇದರರ್ಥ, ಕೊಲೆಗಾರ ಅಮ್ಮುವಿನ ಮನೆಗೆ ಬಂದಾಗ ಅಮ್ಮು ಕಾಲ್ಬೆರಳುಗಳಿಗೆ ಉಗುರು ಬಣ್ಣ ಹಚ್ಚಿದ್ಳು'.

'ಅದರಿಂದ ಏನಾಯ್ತು ಸಾರ್?'

'ಹೌದು ಭುಜಂಗ, ಅದಕ್ಕಿಂತ ಮುಖ್ಯವಾದದ್ದು ಎಡಗಾಲಿನ ಕಿರುಬೆರಳು... ಎಲ್ಲರೂ ಗಮನಿಸಿ. ನೋಡೋದು ಬೇರೆ, ಗಮನಿಸೋದು ಬೇರೆ'.

'ಸರಿಯಾಗೆ ಇದೆಯಲ್ಲ ಸಾರ್'.

'ಸೂಕ್ಷ್ಮವಾಗಿ ಗಮನಿಸಿ... ನೋಡಿ ಎಡಗಾಲಿನ ಕಿರುಬೆರಳಿನ ಉಗುರಿನ ಸಿಬುರು ಹಾಗೆ ಇದೆ... ಉಗುರು ಇನ್ನೂ ಪೂರ್ತಿ ಕತ್ತರಿಸಿಲ್ಲ, ಅರ್ಧ ಮಾತ್ರ ಕತ್ತರಿಸಿದೆ... ಆ ರೀತಿ ನೀಟಾಗಿ ಉಗುರು ಕತ್ತರಿಸಲು ನೇಲ್ ಕಟ್ಟರಿನಲ್ಲಿ ಮಾತ್ರ ಸಾಧ್ಯ'.

'ಅದರಿಂದ ಏನಾಯ್ತು ಸಾರ್?'

ಮತ್ತೆ ಭುಜಂಗನ ಪ್ರಶ್ನೆ.

'ಭುಜಂಗ ನನ್ನ ಪ್ರಶ್ನೆ... ಆ ನೇಲ್ ಕಟ್ಟರ್ ಎಲ್ಲಿ ಅಂತ. ತಕ್ಷಣ, ವಿನಯ್, ನೀವು ಮೂರು ಜನ ಅಮ್ಮು ಮನೆಗೆ ಹೋಗಿ ಮತ್ತೆ ಇಂಚಿಂಚೂ ಹುಡುಕಿ. ನನಗೆ ಆ ನೇಲ್ ಕಟ್ಟರ್ ಬೇಕು. ಆದರೆ ಯಾರೂ ಅದನ್ನು ಮುಟ್ಟುವ ಹಾಗಿಲ್ಲ ಏನು?'.

'ಯೆಸ್ ಸಾರ್'.

ಮಾಯಣ್ಣನ ಅಂದಾಜಿನ ಪ್ರಕಾರ ಹಂತಕನು ಆಕ್ರಮಣ ಮಾಡಿದಾಗ ಅಮ್ಮುವಿನ ಕೈಯಲ್ಲಿದ್ದ ಆ ನೇಲ್ ಕಟ್ಟರ್ ಆತ್ಮರಕ್ಷಣಾ ಆಯುಧವಾಗಿರುವ ಸಾಧ್ಯತೆ ಇದೆ ಎಂದು.

ವಿನಯ್ ಮತ್ತು ಇನ್ನಿಬ್ಬರು ಪೇದೆಗಳು ಅಮ್ಮುವಿನ ಮನೆಗೆ ತೆರಳಿ ಮಾಯಣ್ಣ ಹೇಳಿದಂತೆ ಅಲ್ಲಿ ಯಾವ ಮೂಲೆ ಮುಡುಕುಗಳನ್ನೂ ಬಿಡದ ಹಾಗೆ ಹುಡುಕಿದರೂ ಆ ನೇಲ್ ಕಟ್ಟರ್ ಸಿಗದೆ ಬರಿಗೈಯಲ್ಲಿ ಹಿಂತಿರುಗಿದ್ದರು.

ಮಾಯಣ್ಣನಿಗೆ ಮುಖಭಂಗವಾಗಿತ್ತು. ಇಷ್ಟು ಹತ್ತಿರ, ಆದರೂ ಎಷ್ಟು ದೂರ ಅನ್ನುವಂತಾಗಿತ್ತು ಮಾಯಣ್ಣನ ಪರಿಸ್ಥಿತಿ. ಇಡೀ ದಿನ ಸ್ಟೇಷನ್ನಿನಲ್ಲೇ ದಿಕ್ಕೆಟ್ಟವನಂತೆ ಕೂತಿದ್ದ ಮಾಯಣ್ಣ ಸಂಜೆ ತನ್ನ ಕ್ವಾರ್ಟರ್ಸ್‌ಗೆ ಹೋಗಿ ಕಂಬಳಿ ಹೊದ್ದು ಮಲಗಿ ಬಿಟ್ಟಿದ್ದ. ಆದರೆ ಅದ್ಯಾಕೋ ಅಷ್ಟು ಹುಡುಕಿದರೂ ಸಿಗದ ಆ ನೇಲ್ ಕಟ್ಟರ್‌ಗೆ ಈ ಕೊಲೆಯಲ್ಲಿ ಏನೊ ಪಾತ್ರವಿದೆ ಅನಿಸಿ ಅದು ಅವನ ನಿದ್ದೆಯನ್ನು ನುಂಗಿ ಹಾಕಿತ್ತು. ತಾನೇ ಹೋಗಿ ಹುಡುಕಿ ನೋಡಬೇಕು ಎಂಬ ತೀರ್ಮಾನಕ್ಕೆ ಬಂದಿದ್ದ. ತಕ್ಷಣ ಎದ್ದು ಸಿದ್ಧನಾಗಿ ಜೀಪಲ್ಲಿ ಹೊರಟು ಅಮ್ಮು ಮನೆಯ ಮುಂದೆ ಬಂದು ನಿಂತಾಗ, ಗಂಟೆ ನಡುರಾತ್ರಿ ಎರಡೂವರೆ. ತನ್ನ ಉಸಿರು ತನಗೇ ಕೇಳುವಷ್ಟು ನಿಶ್ಶಬ್ದವಾಗಿತ್ತು ಜಗತ್ತು. ಅಮಾವಾಸ್ಯೆಯ ರಾತ್ರಿಯಾದ್ದರಿಂದ ಕತ್ತಲು ಮುತ್ತಿಕೊಂಡು ಸುತ್ತಲಿನ ಏನೂ ಸ್ಪಷ್ಟವಾಗಿ ಕಾಣದಾಗಿತ್ತು. ಮಾಯಣ್ಣ ಗಡಿಬಿಡಿಯಲ್ಲಿ ಟಾರ್ಚ್ ಮರೆತು ಬಂದಿದ್ದ. ಗೇಟಿಗೆ ಬೀಗ ಹಾಕಿತ್ತು. ಕಾಂಪೌಂಡ್ ಗೋಡೆ ಹಾರಿ ಮೆಲ್ಲಗೆ ಸದ್ದು ಮಾಡದಂತೆ ಮೆಟ್ಟಿಲುಗಳನ್ನೇರಿ ಕೊಲೆಯಾಗಿದ್ದ ಅಮ್ಮುವಿನ ಮನೆಯ ಬಾಗಿಲಿಗೆ ಬಂದಿದ್ದ. ಮಧ್ಯಾಹ್ನ ಇಲ್ಲಿಗೆ ಬಂದಿದ್ದ ಅವನ ಪೇದೆಗಳು, ಮತ್ತೆ ಬೀಗ ಜಡಿದು ಅದಕ್ಕೆ ಹಾಕಿದ್ದ ಸೀಲನ್ನು ಬಿಡಿಸಲು, ಒಂದು ಉಪಕರಣವೂ ತಂದಿರಲಿಲ್ಲ. ಯಾವ ಪೂರ್ವಸಿದ್ಧತೆಯು ಇಲ್ಲದೆ ಏಕಾಏಕಿ ಇಲ್ಲಿಗೆ ಹೀಗೆ ಬಂದಿರುವುದು ಸರಿಯೊ ತಪ್ಪೊ ಗಲಿಬಿಲಿಯಾಗಿತ್ತು. ಮುಂಬಾಗಿಲ ಹೊರಗಿನ ಲೈಟಿನ ಸ್ವಿಚ್ ಹೊರಗೇ ಇತ್ತು, ಆದರೆ ಸ್ವಿಚ್ ಒತ್ತಿದರೂ ಲೈಟ್ ಹೊತ್ತಲಿಲ್ಲ, ಕರೆಗಂಟೆಯ ಸ್ವಿಚ್ ಒತ್ತಿದರೆ ಅದೂ ಕೆಲಸ ಮಾಡಲಿಲ್ಲ. ಆಗ ತಿಳಿಯಿತು ಇಡೀ ಲೇಔಟಿನಲ್ಲಿ ಕರೆಂಟ್ ಹೋಗಿದೆ ಎಂದು. ಮೆಲ್ಲಗೆ ತಾಳ್ಮೆಯಿಂದ, ಬಗ್ಗಿ, ತನ್ನ ಮೊಬೈಲ್ ಟಾರ್ಚ್ ಬೆಳಕಿನಲ್ಲಿ ಹಾಕಿದ್ದ ಸೀಲು ಬಿಡಿಸುತ್ತಿದ್ದ ಮಾಯಣ್ಣನಿಗೆ ಯಾರೊ ತನ್ನ ಹಿಂದೆ ನಿಂತು ಗಮನಿಸುತ್ತಿರುವಂತೆ ಭಾಸವಾಗಿ ಚಕ್ಕನೆ ಹಿಂದಕ್ಕೆ ತಿರುಗಲು ಅಲ್ಲಿ ಯಾರೂ ಇರಲಿಲ್ಲ. ತನ್ನ ಮನಸ್ಸು ತನ್ನ ಮೇಲೇ ಆಟ ಕಟ್ಟಿದಂತಿತ್ತು. ಅಂತೂ ಬೀಗ ತೆಗೆದು ಒಳಹೊಕ್ಕು ಚಿಲಕ ಹಾಕಿ, ಮೊಬೈಲ್ ಟಾರ್ಚ್ ಬೆಳಕಿನಲ್ಲಿ, ಸೂಕ್ಷ್ಮವಾಗಿ ಪರಿಶೀಲಿಸುತ್ತಿರಲು ಅದು ಪರಿಚಿತ ಜಾಗವೇನೊ ಎನಿಸಿತ್ತು. ಮಾಯಣ್ಣ ತನ್ನ ಮೊಬೈಲ್ ಟಾರ್ಚ್ ಅತ್ತಿತ್ತ ತಿರುಗಿಸುತ್ತಾ ಅವಲೋಕಿಸುತ್ತಿರಲು, ಎಲ್ಲಾ ವಸ್ತುಗಳು, ಟಾರ್ಚ್ ಬೆಳಕಿನಲ್ಲಿ, ಗೋಡೆ ತಾರಸಿಗಳ ಮೇಲೆ ಚಿತ್ರ ವಿಚಿತ್ರ ನೆರಳುಗಳಾಗುತ್ತಿತ್ತು.

ಮಾಯಣ್ಣನ ಮನಸ್ಸಿನಲ್ಲಿ ಅಚ್ಚಳಿಯದಂತೆ ಮುದ್ರಿತವಾಗಿತ್ತು ಅಲ್ಲಿನ ಚಿತ್ರಣ. ಅಲ್ಲಿ ಇಲ್ಲದ್ದು ಒಂದೇ ಎಂದರೆ, ಕೊಲೆಯಾಗಿ ನೆಲದ ಮೇಲೆ ಅಂಗಾತ ಬಿದ್ದು ಬಿರುಗಣ್ಣಿನಲ್ಲಿ ಬಾಗಿಲ ಕಡೆ ನೋಡುತ್ತಿದ್ದ ರಕ್ತಸಿಕ್ತ ಅಮ್ಮುವಿನ ಕಳೇಬರ. ಆ ಕಳೇಬರ ಈಗಲೂ ಅಲ್ಲೇ ಬಿದ್ದುಕೊಂಡಿದ್ದಂತೆ, ಹಾಗೆ ತಕ್ಷಣ ಎದ್ದು ಕೂತಂತೆ, ದಿಗ್ಗನೆ ಎದ್ದು ಎದುರಿಗೆ ನಿಂತಂತೆ, ನಿಂತು ಕಣ್ಣಿಗೆ ಕಣ್ಣು ಸೇರಿಸಿ ನಿಟ್ಟಿಸಿದಂತಾಗಿ, ಒಂದೆರಡು ಕ್ಷಣ ಹಾಗೆ ನಿಂತಂತೇ ನಿಂತು ಬಿಟ್ಟಿದ್ದ ಮಾಯಣ್ಣ. ಸ್ಥಿಮಿತಕ್ಕೆ ಬರಲು ಎರಡು ಕ್ಷಣ ಬೇಕಿತ್ತು. ಸ್ವಚ್ಛ ಮಾಡಿದ್ದರೂ ನೆಲದ ಮೇಲೆ ಇನ್ನೂ ಹಾಗಾಗೆ ಇತ್ತು ರಕ್ತದ ಕಲೆಗಳು. ಕಿಟಕಿಯ ಪರದೆ, ಗೋಡೆ, ತಾರಸಿಯ ಮೇಲೆ ಚಿಮ್ಮಿ ಆಗಿದ್ದ ರಕ್ತ ಚಿತ್ತಾರಗಳು, ನೋಡಿದವರ ಚಿತ್ತವನ್ನು ಕದಡಿ ರಾಡಿಯೆಬ್ಬಿಸುವಂತಿತ್ತು. ಮೊಬೈಲ್ ಟಾರ್ಚು, ತೋರಿದ ಕಡೆ ಮಾತ್ರ ಬೆಳಗಿ, ಅದರಾಚೆಗಿನ ಜಾಗದ ಕತ್ತಲು ಮಾಯಣ್ಣನನ್ನು ಸ್ವಲ್ಪಮಟ್ಟಿಗೆ ಅಧೀರಗೊಳಿಸಿತ್ತು. ಆಗ ಇದ್ದಕ್ಕಿದ್ದಂತೆ ಬೆಚ್ಚಿ ಬೀಳಿಸುವಂತೆ, ಬಚ್ಚಲು ಮನೆಯ ಒಳಗಿಂದ ಮುಚ್ಚಿದ್ದ ಬಾಗಿಲ ಮೇಲೆ ಡಬಡಬ ಬಡಿದ ಶಬ್ದವಾಗಿತ್ತು. ಪ್ರೇತ ಪಿಶಾಚಿಗಳಲ್ಲಿ ನಂಬಿಕೆಯಿರದ ಮಾಯಣ್ಣ ಕೂಡ ಬೆಚ್ಚಿ ಜಗ್ಗನೆ ಮೊಬೈಲ್ ಟಾರ್ಚ್ ಅತ್ತ ತಿರುಗಿಸಿ ನೋಡಲು, ಒಳಗೆ ನಿಶ್ಚಿತವಾಗಿಯೂ ಯಾರೋ ಇರುವಂತಿತ್ತು. ಇದು ಭಯಭೀತ ಮನದ ಹುಚ್ಚು ಕಲ್ಪನೆಯಲ್ಲವೆನ್ನುವಂತೆ ಈಗ ಮತ್ತಷ್ಟು ಜೋರಾಗಿ ಬಾಗಿಲು ಬಡಿದ ಶಬ್ದವಾಗಿತ್ತು. ಅಳ್ಳೆದೆಯ ಇನ್ಯಾರಾದರೂ ಮಾಯಣ್ಣನ ಜಾಗದಲ್ಲಿದ್ದಿದ್ದರೆ ಅಲ್ಲೇ ಕುಸಿದು ಬಿದ್ದಿರುತ್ತಿದ್ದರೇನೊ. ಧೈರ್ಯಗೆಡದ ಮಾಯಣ್ಣ ಮೆಲ್ಲಗೆ ಹೆಜ್ಜೆ ಹಾಕುತ್ತಾ ಹೊರಗಿನಿಂದ ಚಿಲಕ ಹಾಕಿದ್ದ ಬಚ್ಚಲು ಮನೆಯ ಬಾಗಿಲ ಬಳಿ ಬಂದು ಬಲಗೈಯಲ್ಲಿ ತನ್ನ ಸರ್ವೀಸ್ ರಿವಾಲ್ವಾರ್ ಹಿಡಿದು,

'ಯಾರು... ಯಾರದು ಒಳಗೆ...' ಎಂದ.

ಅವನ ಮಾತಿಗೆ ಉತ್ತರವೆಂಬಂತೆ ಮತ್ತೆ ಇನ್ನಷ್ಟು ಜೋರಾಗಿ ಬಾಗಿಲು ಬಡಿದಿತ್ತು. ಪೀವಿಸಿ ಪ್ಲಾಸ್ಟಿಕ್ ಟೊಳ್ಳು ಬಾಗಿಲಾದ್ದರಿಂದ ಬಡಿತದ ಶಬ್ದ ನಗಾರಿಯಿಂದ ಬಂದಂತಿತ್ತು. ಮೆಲ್ಲಗೆ ಎಡಗೈಯಲ್ಲಿ ಚಿಲಕ ತೆಗೆದು, ಬಾಗಿಲು ಸ್ವಲ್ಪ ಮಾತ್ರ ಸರಿಸಿ, ಹಠಾತ್ ಆಕ್ರಮಣವನ್ನು ಎದುರಿಸಲು ಸಿದ್ಧವಾದಂತೆ ಒಂದು ಹೆಜ್ಜೆ ಪಕ್ಕಕ್ಕಿಟ್ಟಿದ್ದ. ಒಂದು ನಿಮಿಷ ಎಲ್ಲವೂ ಸ್ತಬ್ಧವಾದಂತಾಗಿ ಕ್ಷಣಾರ್ಧದಲ್ಲಿ ಅರೆ ತೆರೆದ ಬಾಗಿಲ ಮೂಲಕ ದೊಡ್ಡ ಬೆಕ್ಕೊಂದು ಸತ್ತೆನೋ ಕೆಟ್ಟೆನೋ ಎಂದು ಹೊರಗೆ ಓಡಿತ್ತು. ಇದೊಂದನ್ನು ಬಿಟ್ಟು ಇನ್ನೆಲ್ಲವನ್ನೂ ನಿರೀಕ್ಷಿಸಿದ್ದ ಮಾಯಣ್ಣ ಬಿಗಿ ಹಿಡಿದಿದ್ದ ಉಸಿರನ್ನು ನಿರಾಳವಾಗಿ ಹೊರಬಿಟ್ಟಿದ್ದ. ಬಹುಶಃ ಮಧ್ಯಾಹ್ನ ಇಲ್ಲಿಗೆ ಬಂದ ಪೇದೆಗಳು ಮುಂಬಾಗಿಲು ತೆರೆದಾಗ ಈ ಮನೆಯಲ್ಲಿ ಒಳಹೊರಗೆ ಓಡಾಡಿ ಪಳಗಿದ್ದ ಬೆಕ್ಕು ಒಳಹೊಕ್ಕು, ಪೇದೆಗಳು ಬೀಗ ಹಾಕಿ ಹೊರಬಂದಾಗ ಬಚ್ಚಲು ಮನೆಯಲ್ಲಿ ಬಂಧಿಯಾಗಿತ್ತೇನೊ? ಈಗ ಯಾರೋ ತನ್ನನ್ನು ಪಾರುಮಾಡುವ ಭಗವಂತ ಬಂದನೆಂದು ಅರಿತು ಹೊರಬರುವ ಚಡಪಡಿಕೆಯಲ್ಲಿ ತನ್ನ ಕಾಲನ್ನು ಬಾಗಿಲಿಗೆ ಬಡಿ ಬಡಿದು ಶಬ್ದ ಮಾಡಿ ಬಿಡುಗಡೆಹೊಂದಿತ್ತು. ಆ ಮೂವರು ಪೇದೆಗಳು ಯಾವ ಜಾಗಗಳನ್ನು ಶೋಧಿಸಿರುವುದಿಲ್ಲವೋ ಆ ಜಾಗಗಳಲ್ಲಿ ಹುಡುಕಾಡಲು ನಿರ್ಧರಿಸಿದ ಮಾಯಣ್ಣ ಕೆಲವಷ್ಟು ಜಾಗಗಳನ್ನು ತಡಕಾಡಿದ ನಂತರ ಕಣ್ಣಿಗೆ ಬಿದ್ದಿದ್ದು, ಮುಂಬಾಗಿಲ ಮೇಲಿನ ಜಗಲಿ. ಮೇಲೆ ಹತ್ತಿ ಅಲ್ಲಿ ನೋಡಲು ಏನೂ ಇರಲಿಲ್ಲ, ಒಂದು ಮುಚ್ಚಳವಿಲ್ಲದ ಪ್ಲಾಸ್ಟಿಕ್ ಬ್ರೆಡ್ ಬಾಕ್ಸ್ ಹೊರತು.